ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ವಿವಾದ: 46:2015-16 ದಿ: 27-04-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು |
|---|---|
| 1) ತಿಪ್ಪಮ್ಮ ಗಂಡ: ರುದ್ರಗೌಡ<br>ಉಪ್ಪಾರ ಹೊಸಳ್ಳಿ ಗ್ರಾಮ<br>2) ಸಂಜೀವನಗೌಡ ತಂದೆ: ನಾರಾಯಣ ಗೌಡ<br>ಉಪ್ಪಾರ ಹೊಸಳ್ಳಿ ಗ್ರಾಮ ಸಿರುಗುಪ್ಪ ತಾಲೂಕ | ಎನ್. ಹನುಮಣ್ಣ<br>ತಂದೆ: ರುದ್ರಗೌಡ<br>ಉಪ್ಪಾರ ಹೊಸಳ್ಳಿ ಗ್ರಾಮ<br>ಸಿರುಗುಪ್ಪ ತಾಲೂಕ |

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಉಪ್ಪಾರಹೊಸಳ್ಳಿ ಗ್ರಾಮ | 343/A | 1-99 | H-25/2015-16 | 107/2015-16 |
| | 343/B | 2-27 | | |

ಪೀಠಿಕೆ:-

ಸಿರುಗುಪ್ಪ ತಾಲೂಕಿನ **ಉಪ್ಪಾರಹೊಸಳ್ಳಿ** ಗ್ರಾಮದ ಸ.ನಂ.343/**A,** ವಿಸ್ತೀರ್ಣ 1-99, ಮತ್ತು **343/B** ವಿಸ್ತೀರ್ಣ 2-27ಎಕರೆ ಜಮೀನಿಗೆ ಸಂಭಂದಿಸಿದಂತೆ ನೋಂದಣಿ ಪತ್ರಸಂಖ್ಯೆ:**SRG-I-06463/2014-15 Dt.16-2-2015** ರನ್ವಯ ಕ್ರಯದಾರ ಸಂಜೀವನಗೌಡ ತಂದೆ: ನಾರಾಯಣ ಗೌಡ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಎನ್. ಹನುಮಣ್ಣ ತಂದೆ ರುದ್ರಗೌಡ** ಇವರು ದಿ: 21-9-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು**ದಿ:22-1-2016, 29-1-2016, 12-3-2016 ಮತ್ತು 22-4-2016** ರಂದು **ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ 1) ತಿಪ್ಪಮ್ಮ ಗಂಡ: ಎನ್.ರುದ್ರಗೌಡ ಉಪ್ಪಾರ ಹೊಸಳ್ಳಿಗ್ರಾಮ, 2) ಸಂಜೀವನಗೌಡ ತಂದೆ: ನಾರಾಯಣಗೌಡ ಉಪ್ಪಾರಹೊಸಳ್ಳಿ ಇವರು ಉಪ್ಪಾರಹೊಸಳ್ಳಿ ಗ್ರಾಮದ ಸ.ನಂ.343/**A**, ವಿಸ್ತೀರ್ಣ 1-99, ಮತ್ತು **343/B** ವಿಸ್ತೀರ್ಣ 2-27 ಎಕರೆ ಜಮೀನು ಇವರು ತಿಪ್ಪಮ್ಮ ಗಂಡ: ರುದ್ರಗೌಡ ಎನ್. ಇವರ ಹೆಸರಿಗೆ ಪಟ್ಟ ಜಮೀನು ಇದ್ದು ಖರೀದಿದಾರರಾದ ಸಂಜೀವನಗೌಡ ತಂದೆ: ನಾರಾಯಣಗೌಡ ಹೆಸರಿಗೆ ಕ್ರಯನೊಂದಣಿ ಸಂಖ್ಯೆ:**SRG-I-06463/2014-15 Dt.16-2-2015** ರನ್ವಯ ನೊಂದಣಿ ಯಾಗಿದ್ದು ಎನ್. ಹನುಮಣ್ಣ ತಕರಾರು ಅರ್ಜಿ ಸಲ್ಲಿಸಿದ್ದು ಸದ್ರಿ ಜಮೀನುದಾರ ನೊಂದಣಿ ಪತ್ರದನ್ವಯ ಶ್ರೀ ಸಂಜೀವನಗೌಡ ತಂದೆ: ನಾರಾಯಣ ಗೌಡ ಇವರಿಗೆ ಪಟ್ಟ ವರ್ಗಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಎನ್.ಹನುಮಂತ ತಂದೆ: ರುದ್ರಗೌಡ ಉಪ್ಪಾರಹೊಸಳ್ಳಿ ಗ್ರಾಮದ ಸ.ನಂ.343/**A**, ವಿಸ್ತೀರ್ಣ 1-99, ಮತ್ತು **343/B** ವಿಸ್ತೀರ್ಣ 2-27 ಎಕರೆ ಜಮೀನು ನಮ್ಮ ತಾಯಿಯಾದ ತಿಪ್ಪಮ್ಮ ಗಂಡ: ರುದ್ರಗೌಡ ಹೆಸರಿನಲ್ಲಿದ್ದು ನಾವುಗಳು 11 ಜನ ಮಕ್ಕಳು ಇರುತ್ತೇವೆ. ನಮಗೂ ಭಾಗ ಇದ್ದು ಹಕ್ಕು ಭಾದ್ಯತೆಗಳು ಇರುತ್ತವೆ. ನಮ್ಮ ತಾಯಿಯವರು ಸಂಜೀವನಗೌಡ ತಂದೆ: ನಾರಾಯಣ ಗೌಡ ಹೆಸರಿಗೆ ಮಾರಾಟ ಮಾಡಿ ಕ್ರಯ ನೊಂದಣಿ ಮಾಡಿಸಿಕೊಟ್ಟಿರುತ್ತಾರೆ. ಎಂದು ದಿ: 2-4-2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಕ್ರಯನೋಂದಣಿ ಪತ್ರ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಉಪ್ಪಾರಹೊಸಳ್ಳಿ ಗ್ರಾಮದ ಸ.ನಂ.343/**A**,ವಿಸ್ತೀರ್ಣ 1-99, ಮತ್ತು **343/B** ವಿಸ್ತೀರ್ಣ 2-27 ಎಕರೆ ಜಮೀನು ಕ್ರಯದಾರರಾದ ಸಂಜೀವನಗೌಡ ತಂದೆ: ನಾರಾಯಣಗೌಡ ಇವರ ಹೆಸರಿಗೆ ಕ್ರಯಪತ್ರ ಪ್ರಕಾರ ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 29-04-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು
ಕರೂರು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ